# ಮೈಕಪ್ಪಿನ ಮೇಕಪ್ ನಿರ್ವಹಣೆ ಬಲುಕಷ್ಟ



**ಅರ್ಪಿತಾ ಮೋಹಿತೆ**
**ಕಲರ್ಸ್ ಕನ್ನಡ 'ದೃಷ್ಟಿಬೊಟ್ಟು' ನಾಯಕಿ**

◆ **ದೃಷ್ಟಿ ಪಾತ್ರವನ್ನು ಅರ್ಪಿತಾ ಹೇಗೆ ಅನುಭವಿಸುತ್ತಿದ್ದಾರೆ?**

ಪಾತ್ರ ತುಂಬ ಚೆನ್ನಾಗಿದೆ. ಧನಾತ್ಮಕ ಚಿಂತನೆಯಿಂದ ಕೂಡಿದೆ. ಈ ಪಾತ್ರ ಎಲ್ಲರಿಗೂ ಒಳ್ಳೆಯದನ್ನೇ ಬಯಸುತ್ತದೆ. ಹಾಗಾಗಿ ಅದೇ ಕಾರಣಕ್ಕೆ ಎಲ್ಲರಿಗೂ ಇಷ್ಟ ಆಗ್ತಿದೆ. ಸಂಬಂಧಗಳ ಬಗ್ಗೆ ಅವಳಿಗೆ ಗೌರವ ಇದೆ. ಎಲ್ಲರ ಜೊತೆ ಒಳ್ಳೆಯ ಬಾಂಧವ್ಯವನ್ನು ಕಾಪಾಡಿಕೊಳ್ಳುವ ಗುಣ ಆಕೆಯ ವಿಶೇಷ. ತನಗೆ ಯಾರೇ ತೊಂದರೆ ಮಾಡಿದರೂ ಪ್ರತಿಯಾಗಿ ಕೇಡನ್ನು ಬಯಸುವ ಹುಡುಗಿ. ಅವರಿಗೂ ಒಳ್ಳೆಯದೇ ಆಗಲಿ ಎಂದು ಹರಸುವಂತಹ ಸ್ವಭಾವದವಳು. ಅದರಲ್ಲಿ ನಾನು ಕಾಣಿಸಿಕೊಳ್ಳುತ್ತಿರುವುದು ಇಷ್ಟ. ಈಗ ಸದ್ಯ ಅದರ ಟ್ರ್ಯಾಕ್ ಭಿನ್ನ ದಾರಿಯಲ್ಲಿ ಸಾಗುತ್ತಿದೆ. ಸದ್ಯದಲ್ಲಿ ಮುಚ್ಚಿಟ್ಟ ಸಂಗತಿ ಬಯಲಿಗೆ ಬರುತ್ತದೆ. ಆಕೆಗೆ ಅವರ ತಾಯಿ ಕಪ್ಪು ಹಚ್ಚಿ ವಿಕಾರ ಮಾಡಿದ್ದಾರೆ. ಮುಂದೆ ಎಲ್ಲ ಸರಿಯಾಗುತ್ತದೆ. ಅದರ ನಂತರ ಏನೆಲ್ಲ ಸವಾಲುಗಳು ಎದುರಾಗುತ್ತವೆ ಎನ್ನುವುದೇ ಒಟ್ಟಾರೆ ಕಥೆಯ ಸಾರ. ಕುತೂಹಲದಿಂದ ಕೂಡಿರುವ ಇದನ್ನು ಮಾಡುವುದು ಇಷ್ಟ ಆಗುತ್ತಿದೆ. ಧ್ವನಿ ಮತ್ತು ಅಭಿನಯದ ಬಗ್ಗೆ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿದೆ.

◆ **ನಟಿ ಆಗಬೇಕು ಎನ್ನುವ ಭಾವನೆ ಬಂದಿದ್ದು ಹೇಗೆ?**

ನಟಿ ಆಗಬೇಕು ಎಂದುಕೊಂಡಿರಲಿಲ್ಲ. ಅವಕಾಶ ಅದಾಗಿಯೇ ಬಂದಾಗ ನಿರಾಕರಿಸುವುದು ಸರಿ ಅಲ್ಲ ಎಂದು ಅನ್ನಿಸಿತು. ನಮ್ಮ ಮನೆಯವರೂ ಪ್ರೋತ್ಸಾಹಿಸಿದ್ದರಿಂದ ನಟನೆಯನ್ನು ಆರಂಭಿಸಿದೆ. ನಿಜ ಹೇಳಬೇಕು ಎಂದರೆ ನಾನು ಡಾನ್ಸ್ ಅಥವಾ ನಟನೆಯನ್ನು ಕಲಿತಿಲ್ಲ. ಒಂದು ಪ್ರಯತ್ನ ಎಂದು ಬಂದೆ. ಆರಂಭದಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ಮಾಡುತ್ತಿದ್ದೆ. ಇದೇ ನನ್ನ ಮೊದಲ ಲೀಡ್ ಪಾತ್ರ. ಆಡಿಷನ್‌ಗೆ ನಿರ್ಮಾಣ ತಂಡದಿಂದಲೇ ಕರೆ ಬಂದಿದೆ ಎಂದು ಹೋಗಿದ್ದೆ. ಅದೃಷ್ಟಕ್ಕೆ ನನಗೆ ಸಿಕ್ಕಿದೆ. ಸಿಕ್ಕ ಅವಕಾಶವನ್ನು ಗೌರವದಿಂದ ಮಾಡುತ್ತಿದ್ದೇನೆ. 'ದೃಷ್ಟಿಬೊಟ್ಟು' ಶುರುವಾದ ತಕ್ಷಣ ಆ ವಾತಾವರಣಕ್ಕೆ ಹೊಂದಿಕೊಳ್ಳುವುದು ದೊಡ್ಡ ಸವಾಲಾಗಿತ್ತು. ನಟನೆ ಬರದ ಕಾರಣ ಸಿಕ್ಕಾಪಟ್ಟೆ ಕಷ್ಟ ಎಂದೆನಿಸಿತು. ಆರಂಭದಲ್ಲೇ ನಾಯಕನ ಟ್ರ್ಯಾಕ್ ಬಳ್ಳಾರಿಯಲ್ಲಿ ಇತ್ತು. ಹಾಗಾಗಿ ನನಗೆ 20 ದಿನ ಬಿಡುವು ಸಿಕ್ಕಿತು. ಪಾತ್ರಕ್ಕೆ ನ್ಯಾಯ ಕೊಡಲೇಬೇಕು ಎಂದು ಹಟದಿಂದ ಡಾನ್ಸ್ ಮತ್ತು ನಟನೆಯನ್ನು ಕಲಿತೆ. ಮುಂದಿನ ಶೂಟಿಂಗ್ ಹೊತ್ತಿಗೆ ಒಂದು ಹದಕ್ಕೆ ಬಂದಿದ್ದೆ. ಆಮೇಲೆ ಒಂದೆರಡು ದಿನದಲ್ಲಿ ಪಾತ್ರಕ್ಕೆ ಹೊಂದಿಕೊಂಡಿದ್ದೇನೆ. ಮುಂದೆ ಒಳ್ಳೆಯ ಅವಕಾಶಗಳನ್ನು ನಿರೀಕ್ಷಿಸುತ್ತೇನೆ. ನಟಿಯಾಗಿಯೇ ಬೆಳೆಯಬಹುದು ಎನ್ನುವ ಭಾವನೆ ನನಗಿದೆ.

◆ **ಮೈಕಪ್ಪಿನ ಮೇಕಪ್ ಹೇಗೆ ನಿಭಾಯಿಸುತ್ತೀರಿ?**

ಪಾತ್ರಕ್ಕೆ ಅಗತ್ಯಕ್ಕೆ ತಕ್ಕಂತೆ ಮೇಕಪ್ ಮಾಡುತ್ತಿದ್ದಾರೆ. ಹಾಕಿಕೊಳ್ಳುವುದು ಮತ್ತು ನಿಭಾಯಿಸುವುದು ಎರಡೂ ತುಂಬ ಕಷ್ಟದ ಕೆಲಸ. ನಿರಂತರವಾಗಿ ಟಚ್‌ಅಪ್ ಮಾಡುತ್ತಲೇ ಇರಬೇಕು. ಮೇಕಪ್ ಆಗಾಗ ಹೋಗುತ್ತಲೇ ಇರುತ್ತದೆ. ಸ್ವಲ್ಪ ಲೈಟ್ ಎದುರಾದರೂ ಬಣ್ಣ ಕರಗುತ್ತದೆ. ಕೂಡಲೇ ಬ್ರಶ್ ಹಾಕಬೇಕು. ಪಾತ್ರದಲ್ಲಿ ರಹಸ್ಯ ಇರುವುದರಿಂದ ತುಂಬ ಎಚ್ಚರಿಕೆಯಿಂದ ನೋಡಬೇಕು.

ಮೇಕಪ್ ಮಾಡಲು ಎರಡು ಗಂಟೆಯ ಸಮಯ ಬೇಕಾಗುತ್ತದೆ. ಬೆಳಿಗ್ಗೆ 4.30ಕ್ಕೆ ಎದ್ದೇಳುತ್ತೇನೆ. ಶೂಟಿಂಗ್ ಸ್ಥಳಕ್ಕೆ 6ಕ್ಕೆ ಹೋಗುತ್ತೇನೆ. ನನ್ನ ಮೇಕಪ್ ಮುಗಿದ ನಂತರವೇ ಬೇರೆ ಪಾತ್ರಗಳಿಗೆ ಮಾಡುತ್ತಾರೆ. ಚಪಾತಿಯನ್ನೂ ಚಮಚದಲ್ಲೇ ತಿನ್ನಬೇಕು. ಮನೆಗೆ ಬಂದು ಸ್ನಾನ ಮಾಡುವ ತನಕ ನೀರಿನ ಲೋಟ ಕೂಡ ಮುಟ್ಟಲು ಆಗುವುದಿಲ್ಲ. ಏಕೆಂದರೆ ನಾನು ಮುಟ್ಟಿದ ಎಲ್ಲ ವಸ್ತುಗಳಿಗೂ ಕಪ್ಪು ಅಂಟುತ್ತಿರುತ್ತದೆ. ಈಗ ಅದಕ್ಕೆ ಹೊಂದಿಕೊಂಡಿದ್ದೇನೆ.

◆ **ನಿಮ್ಮ ಕನಸು ಏನಾಗಿತ್ತು?**

ಬಿಕಾಂ ಮುಗಿಸಿದ ನಂತರ ಮೇಕಪ್ ಕಲಿತೆ. ಎರಡು ವರ್ಷ ಮೇಕಪ್ ಆರ್ಟಿಸ್ಟ್ ಆಗಿ ಕೆಲಸವನ್ನೂ ಮಾಡಿದೆ. ಅದನ್ನು ಮಾಡುತ್ತಿದ್ದ ಹಾಗೆ ಅಭಿನಯ ನನ್ನನ್ನು ಕರೆಯಿತು. ಈಗ ಅದನ್ನೂ ಕಲಿತು ಮಾಡುತ್ತಿದ್ದೇನೆ. ಪಾತ್ರಕ್ಕಾಗಿ ಏನೇ ಅಗತ್ಯ ಇದ್ದರೂ ಅದಕ್ಕೆ ತಯಾರಿ ಮಾಡಿಕೊಳ್ಳುತ್ತೇನೆ. ಈ ಪಾತ್ರಕ್ಕೆ ಡಯೆಟ್ ಮಾಡಿ ನನ್ನನ್ನು ಇದಕ್ಕೆ ಬ್ಲೆಂಡ್ ಮಾಡಿಕೊಂಡಿದ್ದೇನೆ. ಮುಂದೆ ಕೂಡ ಪಾತ್ರ ಬಯಸಿದಂತೆ ನಾನು ತಯಾರಿ ಮಾಡಿಕೊಳ್ಳಲು ಸಿದ್ಧಳಿದ್ದೇನೆ.

ಸಾಮಾಜಿಕ ಮಾಧ್ಯಮಗಳಿಂದ ಸದ್ಯ ಹೊರಗಿದ್ದೇನೆ. ಅದರ ಮೂಲಕ ನನ್ನ ಮೂಲ ಸ್ವರೂಪ ಬಹಿರಂಗವಾದರೆ, ಪಾತ್ರದ ಮೇಲಿನ ಕುತೂಹಲ ಕಡಿಮೆ ಆಗಬಹುದು ಅನ್ನುವ ಕಾರಣಕ್ಕೆ ಬಳಸುತ್ತಿಲ್ಲ. ಆರಂಭದಲ್ಲಿ ಪೋಸ್ಟ್ ಹಾಕಬೇಕು ಎಂದು ಅನ್ನಿಸಿದರೂ ಈಗ ಹಾಕುವಂತಿಲ್ಲ ಎಂಬ ಎಚ್ಚರಿಕೆಯಿಂದ ಸುಮ್ಮನಾದೆ. ಒಂದೆರಡು ದಿನ ಕಳೆದ ಮೇಲೆ ಮರೆತೇಹೋಯಿತು.

■ **ರಾಘವೇಂದ್ರ ಕೆ.**